person who is not an advocate, the teaching of law will not be effective and lively. Appropriate steps in the matter may please be taken during the academic year 1990–91.

SRI K H. RANGANATH (Minister for Education).—Madam Deputy Speaker Shri R. Madhwaraj was engaged as a part-time Lecturer in Commercial Law during the year 1986–87 in Women's polytechnic, Mangalore. He was appointed for the year 1989–90 taking into consideration his previous experience of 13 years in teaching the subject. He was preferred to a practising advocate in view of his B.Ed., qualification and teaching experience. If an advocate having interest in teaching the subject comes forward during the year 1990–91, he will be considered.

(V) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಆಡಳಿತ ವರ್ಗವು ಆಂಗ್ಲ ಭಾಷೆಯನ್ನು ಕಾರ್ಮಿಕರ ಮೇಲೆಹೇರುತ್ತಿರುವ ಬಗ್ಗೆ

ಶ್ರೀ ಬಿ. ಎಂ. ಇದಿನಬ್ಬ.— ಸನ್ಮಾನ್ಯ ಅಧ್ಯಕ್ಷರೆ, ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಆಡಳಿತ ವರ್ಗವು ಆಂಗ್ಲ ಭಾಷೆಯನ್ನು ಕಾರ್ಮಿಕರ ಮೇಲೆ ಹೇರುತ್ತಿರುವ ಬಗ್ಗೆ ಪ್ರತಿಭಟಿಸಿ ಕೇಂದ್ರ ಕಚೇರಿ ಎದುರು ಜುಲೈ ೧೦ರಂದು ಧರಣಿ ಸತ್ಯಾಗ್ರಹ ನಡೆಸಲಾಗುವುದೆಂದು ಸಾರಿಗೆ ಸಂಸ್ಥೆಯ ಕ್ರಿಯಾ ಸಮಿತಿಯ ಗೌರವ ಅಧ್ಯಕ್ಷರು ತಿಳಿಸಿದ್ದಾರೆ. ಆಡಳಿತದಲ್ಲಿ ಪೂರ್ಣವಾಗಿ ಕನ್ನಡ ಜಾರಿಗೆ ತರಲು ಆಡಳಿತ ವರ್ಗಕ್ಕೆ ೧೨ ಅಂಶಗಳ ಮನವಿಯನ್ನು ಸಲ್ಲಿಸಿದ್ದು ಯಾವುದೇ ಪ್ರತಿಕ್ರಿಯೆ ಬಂದಿಲ್ಲವೆಂದು ತಿಳಿಸಿದ್ದಾರೆ, ಅಲ್ಲದೆ ಪರರಾಜ್ಯದವರಿಗೆ ಈ ಸಂಸ್ಥೆಯಲ್ಲಿ ಹೆಚ್ಚಿನ ಉದ್ಯೋಗಾವಕಾಶ ದೊರೆಯುತ್ತಿದೆ. ರಾಜ್ಯದಲ್ಲಿ ಕನ್ನಡವನ್ನು ಒಂದು ವಿಷಯವಾಗಿ ತೆಗೆದುಕೊಂಡು ತೇರ್ಗಡೆಯಾಗಿದ್ದರೆ ಮಾತ್ರ, ಸಂಸ್ಥೆಯಲ್ಲಿ ಉದ್ಯೋಗಕ್ಕೆ ಅರ್ಹವಾಗುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕು. ಚಾಲಕರು ನಿರ್ವಾಹಕ ಮಾರ್ಗಸೂಚಿ ಪತ್ರದಿಂದ ಹಿಡಿದು ಎಲ್ಲ ಆರ್ಡರ್ ನಮೂನೆ ಪತ್ರಗಳೆಲ್ಲ ಕನ್ನಡದಲ್ಲಿರಬೇಕು. ಅಲ್ಲದೆ ಎಲ್ಲ ಆಂಗ್ಲ ಬೆರಳಚ್ಚು ಯಂತ್ರಗಳನ್ನು ವಾಪಸ್ಸು ಪಡೆದು ಕನ್ನಡ ಬೆರಳಚ್ಚು ಯಂತ್ರಗಳನ್ನು ಪೂರೈಸಬೇಕು ಹಾಗೂ ಹೆಚ್ಚುವರಿ ಬೇಡಿಕೆಗಳನ್ನು ಈಡೇರಿಸಬೆ ಕೆಂದು ಈ ಕ್ರಿಯಾಸಮಿತಿ ಒತ್ತಾಯಿಸಿದೆ ಈ ಸಂದರ್ಭದಲ್ಲಿ ಮಾನ್ಯ ಸಾರಿಗೆ ಸಚಿವರು ಈ ಬಗ್ಗೆ ಗಮನವಿರಿಸಿ ತಪ್ಪು ಹೇಳಿಕೆಯನ್ನು ನೀಡಬೇಕೆಂದು ಕೋರುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಉಪಾಧ್ಯಕ್ಷಣಿಯವರೆ ಮಾನ್ಯ ಸಾರಿಗೆ ಖಾತೆ ಸಚಿವರ ಪರವಾಗಿ ಈ ಹೇಳಿಕೆಯ ನ್ನು ನೀಡುತ್ತೇನೆ ಸರ್ಕಾರದ ಆಡಳಿತ ಭಾಷೆ ಕನ್ನಡ. ಸರ್ಕಾರದ ನಿಲುವು ಇದರಲ್ಲಿ ನಿಚ್ಚಳವಾಗಿದೆ. ಆದರೂ ಸಹ ಮಾನ್ಯ ಸದಸ್ಯರು ಏನು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಅದನ್ನು ಮಾನ್ಯ ಸಾರಿಗೆ ಖಾತೆಯ ಸಚಿವರ ಗಮನಕ್ಕೆ ತಂದು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ತಿಳಿಸುತ್ತೇನೆ.

(VI) ಕುಂದಾಪುರ ತಾಲ್ಲೂಕಿನಲ್ಲಿ ಕೈಗಾರಿಕಾ ಎಸ್ಟೇಟ್ ಸ್ಥಾಪನೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಉಪಾಧ್ಯಕ್ಷಣಿಯವರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಂದಾಪುರ ಒಂದು ಪ್ರಮುಖ ಕೈಗಾರಿಕಾ ಕೇಂದ್ರ. ಹಲವಾರು ಹೆಂಚಿನ ಕಾರ್ಖಾನೆಗಳು, ಗೇರು ಬೀಜ ಸಂಸ್ಕರಣ ಘಟಕಗಳು, ಮರಜುಗಡ್ಡೆ ಘಟಕಗಳು, ಅಕ್ಕಿ ಮತ್ತು ಎಣ್ಣೆ ಮಿಲ್ಲುಗಳು. ನಾರಿನ ಉದ್ದಿಮೆ, ತೆಂಗಿನ ಪುಡಿ ತಯಾರಿಕೆ, ಲಘು ಪಾನೀಯಗಳು, ಫೆನ್ನಿ ಮುಂತಾದ ಉತ್ಪಾದನೆ, ಪೈಪುಗಳು, ರಾಸಾಯನಿಕಗಳ ತಯಾರಿ. ಇತ್ಯಾದಿ ಅನೇಕ ಉದ್ದಿಮೆಗಳಿದ್ದು, ಮೋಟಾರು ವಾಹನ ಹಾಗೂ ಕೃಷಿ ಯಂತ್ರಗಳ ದುರಸ್ತಿಗಳ ಕಾರ್ಯಾಗಾರಗಳೂ ಅನೇಕವಿವೆ. ಯಾಂತ್ರಿಕ ತರಬೇತಿ ಶಾಲೆಯೂ ಇದ್ದು ಉತ್ಸಾಹಿ ಯುವಕರು ಸ್ವಂತ ಉದ್ದಿಮೆ ಸ್ಥಾಪನೆಗೆ ಉತ್ಸಾಹ ತೋರಿದ್ದಾರೆ. ಅನೇಕ ವರ್ಷಗಳಿಂದ ಕುಂದಾಪುರ ತಾಲ್ಲೂಕಿನಲ್ಲಿ ಒಂದು ಕೈಗಾರಿಕಾ ಎಸ್ಟೇಟ್ ಸ್ಥಾಪನೆ ಆಗಬೇಕೆಂದು ಯೋಜನೆ ಇದ್ದರೂ, ಯೋಜನೆ ರಂಪೂರ್ಣ ಕಾರ್ಯಗತವಾಗಿಲ್ಲ. ಅವಶ್ಯಕತೆ ಅತೀವ ಅಗತ್ಯತೆಗಳಿಂದಾಗಿ ಈ ವಿಚಾರದಲ್ಲಿ ಸೂಕ್ತ ನಿರ್ಧಾರಕ್ಕಾಗಿ ಸರ್ಕಾರವನ್ನು ಆಗ್ರಹಪೂರ್ವಕ ಒತ್ತಾಯಿಸುತ್ತೇನೆ.